ನಾಯಿ ತಿನ್ನುವವರು ಶಾಂಗೈನಲ್ಲಿ ಜಾಸ್ತಿ ಇದ್ದಾರೆ, ನಾವೂ ಅಪರೂಪಕ್ಕೆ ಮಾಡುವುದು, ಊರು ನೋಡಲು ಬಂದದ್ದಲ್ಲವೇ? ಮತ್ತೇನು ಮಾಡುತ್ತಿದ್ದಿ?" ಎಂದಳು. ತಲೆಯಲುಗಿಸಿ ನಾನೂ ಟಿನಮನ್ ಸ್ಕೇರಿನತ್ತ ಹೆಜ್ಜೆ ಹಾಕಿದೆ.

ಸರಿಯಾಗಿ ಎರಡು ಗಂಟೆಯ ಅನಂತರ ಮತ್ತೆ ಎಲ್ಲರೂ ಸೇರಿದರು. ತಲೆ ಲೆಕ್ಕ ಹಾಕಿದವಳು ವಿಸಿಲ್ ಊದಿ ಡ್ರೈವರಿಗೆ ಸೂಚನೆ ಕೊಟ್ಟಳು. ಬಸ್ಸಿನಲ್ಲಿದ್ದ ಹೆಚ್ಚಿನವರು 60 ವರ್ಷದ ಮೇಲಿನವರು, ನಿವೃತ್ತಿ ಹೊಂದಿ, ಮಕ್ಕಳ ಮದುವೆ ಮಾಡಿ, ಹಾಯಾಗಿ ದೇಶ ನೋಡಲು ಗ್ರೂಪ್ ಟೂರಿನಲ್ಲಿ ಬಂದವರು ಸಮಯ ಸಿಕ್ಕಾಗಲೆಲ್ಲಾ ಮಕ್ಕಳ, ಮೊಮ್ಮಕ್ಕಳ ಸುದ್ದಿ ಬಿಚ್ಚುತ್ತಿದ್ದರು. ನಾನೋ ಗೊಬ್ಬರದ ಗುಂಡಿಯಾಗಿದ್ದ ತಲೆಯನ್ನು ರಿಫ್ರೆಶ್ ಮಾಡಲು ಇವರೊಂದಿಗೆ ಸೇರಿಕೊಂಡಿದ್ದೆ. ಎಲ್ಲದರಿಂದ ತಪ್ಪಿಸಿಕೊಳ್ಳಲು, ಅಟ್ಟಿಸಿಕೊಂಡು ಬರುವ ನೆನಪುಗಳನ್ನು ಎತ್ತಿ ಒಗೆಯಲು ಇಲ್ಲಿಗೆ ಬಂದರೆ, ಮನಸ್ಸು ಮಾತ್ರ ಐದು ಸಾವಿರ ಕೀ.ಮಿ ಆಚೆ ಇರುವ ಬೆಂಗಳೂರಿನ ಸುತ್ತವೇ ಸುತ್ತುತ್ತಿದೆ. ಬಲವಂತವಾಗಿ ಕಿಟಕಿಯಿಂದಾಚೆ ನೋಡಲು ಪ್ರಯತ್ನಿಸಿದೆ. ದಾರಿ ಬದಿಯಲ್ಲಿ ಆಟಿಕೆ ಮಾರುವ ಹಣ್ಣು ಹಣ್ಣು ಮುದುಕಿಯರು, ಸುಟ್ಟ ಗೆಣಸು ಮಾರುವ ಗಂಡಸರು ಕಾಣಿಸಿದರು.

ಎತ್ತಲೋ ನೋಡುತ್ತಿದ್ದ ನನ್ನನ್ನು ಮುಂದೆ ಕೂತಿದ್ದ ಕುಲಕರ್ಣಿ ದಂಪತಿ ಹಿಂದೆ ತಿರುಗಿ ಮಾತಾಡಿಸಲು ಪ್ರಯತ್ನಿಸಿದರು. "ರಿಷಿಕಾ ಅಲ್ಲವೇ ನಿನ್ನ ಹೆಸರು? ಒಬ್ಬಳೇ ಬಂದದ್ದಾ? ಮದುವೆಯಾಗಿದೆಯಾ? ಕುತ್ತಿಗೆಯಲ್ಲಿ ಕರಿಮಣಿ ಕಾಣಿಸುತ್ತಿಲ್ಲ, ಹಾಗೆ ಕೇಳಿದೆ?" ಮಿಸೆಸ್ ಆಶಾ ಕುಲಕರ್ಣಿ ಎಂದಾಗ ಎಲ್ಲದಕ್ಕೂ ಹೌದೆನ್ನುವಂತೆ ತಲೆಯಲ್ಲಾಡಿಸಿದೆ. "ಅಲ್ಲಾ, ಗಂಡ ಹೆಂಡತಿ ಜಗಳ ಮಾಡಿಕೊಂಡು ಬಂದದ್ದಾ? ಏಕೆ ಕೇಳಿದೆ ಎಂದರೆ, ಇದೆಲ್ಲಾ ಕಾಮನ್ ಈಗ; ಮದುವೆ ಇಲ್ಲದೆಯೂ ಒಟ್ಟಿಗಿರುತ್ತಾರೆ... ಮದುವೆ ಆದವರೂ ಬೇರೆ ಬೇರೆಯಾಗಿರುತ್ತಾರೆ" ಆಶಾ ಎಂದಾಗ ಮುಖ ಕೆಂಪಾಯಿತು, ಅಧಿಕಪ್ರಸಂಗಿ ಎನಿಸಿತು. ಉತ್ತರ ಕೊಡಲಿಲ್ಲ. ನನಗೆ ಮಾತಾಡಲು ಮನಸ್ಸಿಲ್ಲದ್ದು ನೋಡಿ ಮುಂದೆ ತಿರುಗಿಕೊಂಡರು. ಆದರೂ ಮಧ್ಯೆ ಮಧ್ಯೆ ಓರೆಗಣ್ಣಿನಿಂದ ನನ್ನ ಮುಖ ನೋಡುವುದನ್ನು ಬಿಡಲಿಲ್ಲ. ಅಲ್ಲಿರುವ ಭಾವನೆಗಳನ್ನು ಓದಿ ಒಂದು ತೀರ್ಮಾನಕ್ಕೆ ಬರಲು ಪ್ರಯತ್ನಿಸುತ್ತಿದ್ದಿರಬೇಕು.

ಗಾಳಿಯಲ್ಲಿ ತೇಲುತ್ತಿರುವಂತೆ ಹೊರಟ ಬಸ್ಸು 'ಟೆಂಪಲ್ ಆಫ್ ಹೆವನ್'ನಿನ ಮುಂದೆ ನಿಂತಿತು. ನೀಲಿ, ಬಿಳಿಯ ಮೂರಂತಸ್ತಿನ ಸುಂದರ ಸ್ಮಾರಕ; ಶಾಂತ, ಪ್ರಫುಲ್ಲ ವಾತಾವರಣ. ಆದರೆ, ಇದೇ ಶತಮಾನಕ್ಕೆ ಸೇರಿದ ನಮ್ಮ ದೇಶದ ವಾಸ್ತುಶಿಲ್ಪಕ್ಕೆ ಹೋಲಿಸಿದರೆ ಇದು ಏನೂ ಅಲ್ಲ ಅನಿಸಿತು. ಅವರವರದ್ದು ಅವರಿಗೆ ಚಂದ. ಒಂದೆರಡು ಫೋಟೊ ತೆಗೆದುಕೊಳ್ಳುತ್ತಿದ್ದಂತೆ ಒಂಟಿಯಾಗಿ ಶೆರ್ಲಿ ಸಿಕ್ಕಳು. ಖುಷಿ ಖುಷಿಯಲ್ಲಿದ್ದ ಅವಳನ್ನು ಛೇಡಿಸುವ ಮನಸ್ಸಾಯಿತು. "ಏನೆನ್ನುತ್ತಾನೆ ಬಾಯ್ ಫ್ರೆಂಡ್?" ನಕ್ಕವಳು, "ಎರಡು ಮೂರು ದಿನಗಳಿಂದ ನನ್ನ ಮೆಸೇಜಿಗೆ ಉತ್ತರವಿಲ್ಲ, ಬ್ಯೂಸಿ ಇರಬೇಕು. ಮಾರ್ಕೆಟಿಂಗ್ ಫೀಲ್ಡಿನಲ್ಲಿದ್ದಾನೆ. ನೋಡುತ್ತಿರು, ಇನ್ನು ಮೂರು ತಿಂಗಳಲ್ಲಿ ಅವನನ್ನು ಮದುವೆಯಾಗುತ್ತೇನೆ; ನಾಲ್ಕೈದು ವರ್ಷಗಳಲ್ಲಿ ಎರಡು ಮಕ್ಕಳನ್ನು ಹೆರುತ್ತೇನೆ, ನಿಮ್ಮ ಇಂಡಿಯನ್ಸ್ ತರಹ". "ಗುಡ್, ಗುಡ್ ಶೆರ್ಲಿ, ನಿಮ್ಮಲ್ಲಿ ಒಂದು ಕುಟುಂಬಕ್ಕೆ ಒಂದೇ ಮಗು ಎನ್ನುವ ಕಾನೂನು ಇದೆಯಲ್ವಾ?" "ಕಾನೂನು ಇರುವುದು ಹೌದು. ಒಂದನ್ನು ಇಲ್ಲಿಯೇ ಹೆತ್ತು, ಇನ್ನೊಂದನ್ನು ಎಲ್ಲಾದರೂ ಹಳ್ಳಿಯಲ್ಲಿ ಗುಟ್ಟಾಗಿ ಹೆರುತ್ತೇನೆ, ಯಾರಿಗೂ ಗೊತ್ತಾಗೋಲ್ಲ. ಹಾಗೆ ಮಾಡುವವರೂ ಇದ್ದಾರೆ. ಮುಖ್ಯವಾಗಿ

